ಹೇಳಿ ಅದನ್ನು ಮಾಡಿದರೆ ವಿದ್ಯಾರ್ಥಿಗಳಿಗೆ ಸಹಾಯ ಆಗುವುದಲ್ಲದೆ ದೇಹ ವಿಲೇವಾರಿ ಕೂಡ ಸುಲಭ ಎಂದು ಬೋಧಿಸಿದ್ದರು. ಅದು ನಿಜವೂ ಕೂಡ ಎನ್ನಿ.

ಒಂದು ಒಂದು ಮೀಟಿಂಗ್ ಅಟೆಂಡ್ ಮಾಡಿದ ಮೇಲೆ ಪ್ರೇರೇಪಿತರಾಗಿ ಅವರೂ ದೇಹದಾನ ಅರ್ಜಿ ತುಂಬಿಸಿಯೇ ಬಿಟ್ಟರು. ಅವರು ತಮ್ಮ ಊರಿಗೆ ಹೋದ ಮೇಲೆ ಇದ್ದಕ್ಕಿದ್ದ ಹಾಗೆ ಒಂದು ರಾತ್ರಿ ನನಗೆ ಅವರ ನಂಬರಿನಿಂದ ಕರೆ. ರಾತ್ರಿ ಹತ್ತು ಗಂಟೆಯ ಮೇಲೆ, ಬೆಳಿಗ್ಗೆ ಏಳೂವರೆಯ ಒಳಗೆ ಯಾರಾದರೂ ಫೋನ್ ಮಾಡಿದರೆ ಸ್ವಲ್ಪ ಚಿಂತೆ ಆಗುತ್ತದೆ.

"ತಯೀ... ಅಜ್ಜರು ಮಾತಾಡ್ತರಂತ ನೋಡವ..."

"ಹೂ ಕ್ವಡ್ರಿ... ಹಲೋ..."

"ಹಲೋ... ಯಾರವಾ..." (ಅಜ್ಜಾರು)

"ನಾನ್ರೀ..."

"ಹಾ... ಕೇಳವಾ ತಯೀ... ಅಲ್ಲಿ ನಿಮ್ಮೂರಾಗ ನಮ್ಮ ಸಂತೋಷು, ರುದ್ರೇಶಿ, ಮಾಂತಪ್ಪ, ಮಾದೇವಕ್ಕ... ಎಲ್ಲಾರ ನಂಬರ್ನೂ ನಿಮ್ಮಪ್ಪನ ತಗ ಕ್ವಟ್ಟು ಬಂದನಿ... ಎಲ್ರಿಗೂ ಹೇಳಿ ಬಿಡವಾ..."

"ಏನ್ ಹೇಳಬಕ್ರಿ?"

"ಅಜ್ಜಾರು ಸಿರಿಯಸ್ ಅಂತ..."

"ಯಾರು?"

"ನಾನೇ ಕಣ ತಯೀ... ನಾಳಿ ಬ್ಯಳಿಗ್ಗೆ ಮಟ ನಾನಿರದುಲ್ಲ... ಹೋಗಿರತನಿ... ಮಣ್ಣಿಗೆ ಬರತೀವಿ ಅನ್ನಾರಿಗೆ ಈಗಲೇ ಹ್ವಂಡು ಅಂತೇಳಿಬಿಡು..."

"ಅಯ್ಯ ಆರಾಮ ಮಾತಾಡಾಕತ್ತೀರಲ್ರೀ?"

"ನಾ ಹೇಳಿದಷ್ಟು ಮಾಡು..." ಅಂತ ತೇಕುತ್ತಾ ಇನ್ನೊಬ್ಬರ ಕೈಗೆ ಫೋನು ಕೊಟ್ಟರು... ಅವರೂ ಕೂಡ ಕಳವಳ ಆಗುವ ಹಾಗೆ ಮಾತಾಡಿದರು.

"ಇಲ್ಲ ಕಣ ತಯಿ... ಅವ್ರು ಹೇಳಿದ ಹಂಗೇ ಮಾಡವಾ... ಭಾಳ ತ್ರಾಸ ಅಗೇತಿ..."

ಆಯಿತು ಎಂದು ಮನೆಗೆ ಬಂದು ನೋಡಿದರೆ ನನ್ನ ತಂದೆ ಆಗಲೇ ಮಲಗಿದ್ದರು. ಹಾಗಾಗಿ ಎಬ್ಬಿಸಿ ನಂಬರುಗಳನ್ನು ಕೇಳುವುದು ಸಮಂಜಸವಲ್ಲ ಎನ್ನಿಸಿ ಸುಮ್ಮನಾದೆ. ಹೇಗೂ ಹೊರಡುವವರು ಸರಿರಾತ್ರಿಯಲ್ಲಿ ಹೋಗುವುದೂ ಇಲ್ಲವಲ್ಲ ಎನ್ನುವುದು ನನ್ನ ಲಾಜಿಕ್ಕು.

ಬೆಳಿಗ್ಗೆ ಎದ್ದು ನಂಬರ್ ಕೇಳುವ ಮುನ್ನ ಒಮ್ಮೆ ಅಜ್ಜಾರ ಸ್ಟೇಟಸ್ ಚೆಕ್ ಮಾಡೋಣ ಎನ್ನಿಸಿ ಫೋನ್ ಮಾಡಿದೆ. ಬೇರೆ ಯಾರೋ ಎತ್ತಿದರು. ನಾನು ಹಿಂಜರಿಯುತ್ತಲೇ ಕೇಳಿದೆ.

"ಹ್ಯಂಗದಾರ್ರಿ ಅಜ್ಜಾರು?"

ಇಷ್ಟೊತ್ತಿಗೆ ಬಾಡಿ ಮನೆಗೆ ಒಯ್ಯಲು ರೆಡಿ ಮಾಡುತ್ತಿರಬೇಕು ಎಂದುಕೊಂಡೆ... ಹೊಟ್ಟೆಯಲ್ಲಿ ಒಂಥರಾ ಕಸಿವಿಸಿ ಆಗುತ್ತಿತ್ತು.

"ಎರಡು ಇಡ್ಲಿ ತಿಂದಾರ... ಒಂದು ಉದ್ದಿನ ವಡಿ ಕೇಳಾಕ ಹತ್ಯಾರ... ಡಾಕ್ಟ್ರು ಬರಲಿ ಆಮೇಲ ನೋಡನ ಅಂದೆ..."

"ತರಿಸಿ ಕ್ವಡ್ರೀ ಅತ್ಲಾಗ. ಇವ್ರ್ ಫೋನಿಗೆ ರಾತ್ರೆಲ್ಲಾ ನಿದ್ದಿ ಆಗಿಲ್ಲ ನಮಿಗೆ ಥತ್ತೇರಿ!"

"ತಡಿ ಮಾತಾಡತರಂತ ಕ್ವಡ್ತನಿ..."

"ಹೂ ಹೇಳವಾ... ಆರಾಮದೀಯ?"

"ಈ ಸದ್ಯ ನೀವೊಬ್ರೆ ಆರಾಮಿರಾದು... ನಮ್ದೆಲ್ಲಾ ತಲಿ ಕ್ಯಡೀಸಿ ಇಡ್ಲಿ ತಿನ್ನಾಕತ್ತೀರಾ?" ಅಂತ ಬೈದೆ...